ದಿನಾಂಕ: 14-07-2026 ರಂದು ಸಾಕ್ಷಿಯನ್ನು ಪುನ: ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು : ವಾದಿ ಪರ ಶ್ರೀ ಯು.ಟಿ.ಪಿ ವಕೀಲರಿಂದ.</u>**

ಈ ದಾವೆಯನ್ನು ನಾಗಮ್ಮ ಮತ್ತು ಇತರರು ಸರ್ಕಾರದ ವಿರುದ್ದ ಹಾಕಿರುತ್ತಾರೆ. ಅವರ ಜಮೀನು ಭೂಸ್ವಾಧೀನಯಾಗಿದ್ದು, ಈ ಬಗ್ಗೆ ಅವರಿಗೆ ಪರಿಹಾರ ಕೊಟ್ಟಿಲ್ಲ ಎಂದು ಈ ದಾವೆಯನ್ನು ಹಾಕಿರುತ್ತಾರೆ. ಅವರ ವ್ಯವಸಾಯಕ್ಕೆ ತೊಂದರೆ ಕೊಟ್ಟಿರುವುದರಿಂದ ವಾದಿ ಈ ದಾವೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸರ್ವೆ ನಂಃ 418 ಎ/2 ವಿಸ್ತೀರ್ಣ 3.25 ಎಕರೆ ಆಗಿರುತ್ತದೆ. ದಾವಾ ಆಸ್ತಿ ಕುರೆಕುಪ್ಪಾ ಗ್ರಾಮದಲ್ಲಿ ಇರುತ್ತದೆ. ದಾವಾ ಆಸ್ತಿಯಲ್ಲಿ ವಾದಿಯು ಈಗಲೂ ಸಹ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 2017 ರಲ್ಲಿ ವಾದಿ ವ್ಯವಸಾಯ ಮಾಡುತ್ತಿರುವಾಗ 5 ರಿಂದ 7 ನೇ ಪ್ರತಿವಾದಿಗಳು ಪೈಪ್ ಹಾಕಲು ಬಂದಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಹೂಡಿದ ನಂತರ ನಾನು ದಾವಾ ಆಸ್ತಿಗೆ ಭೇಟಿ ಕೊಟ್ಟಿರುವುದಿಲ್ಲ. ಈಗಲೂ ಸಹ ವಾದಿಯೇ ಸ್ವಾಧೀನ ಅನುಭವದಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2017 ರಲ್ಲಿ ಪ್ರತಿವಾದಿ 5 ರಿಂದ 7 ರವರು ಪೈಪ್ ಲೈನ್ ಹಾಕಲು ಬಂದಾಗ ವಾದಿಗೆ ತನ್ನ ಜಮೀನು ಭೂಸ್ವಾಧೀವಾಗಿರುವ ಬಗ್ಗೆ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ಎಲ್ಲ ನೋಟಿಫಿಕೇಷನ್ ಗಳು ವಾದಿಯ ಗಮನಕ್ಕೆ ಇರುತ್ತದೆ ಎಂದು ನುಡಿಯುತ್ತಾರೆ. ವಾದಿಗೆ ಭೂಸ್ವಾಧೀನ ಆಗಿರುವ ಬಗ್ಗೆ ಯಾವುದೇ ನೋಟಿಸ್ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಭೂಸ್ವಾಧೀನವು ರಸ್ತೆ ನಿರ್ಮಾಣಕ್ಕಾಗಿ ಆಗಿರುತ್ತದೆ. ರಸ್ತೆ ನಿರ್ಮಾಣ ಆಗಿದಿಯೋ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ವಾದಿಯು ಈಗಲೂ ಸಹ ದಾವಾ ಆಸ್ತಿಯಲ್ಲಿ ಬೊರ್ ಹಾಕಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಆಸ್ತಿಯಲ್ಲಿ ಯಾವುದೇ ಭೂಸ್ವಾಧೀನ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಭೂಸ್ವಾಧೀನ ಆಗಿರುವ ಬಗ್ಗೆ ವಾದಿಗೆ ಪರಿಹಾರವನ್ನು ದಿಃ10.08.2023 ರಂದು ಮಾನ್ಯ 1 ನೇ

ಹೆಚ್ಚುವರಿ ಜಿಲ್ಲಾ ನ್ಯಾಯಾಲಯ ಬಳ್ಳಾರಿ ರವರ ಮುಂದೆ ಚೆಕ್ ಮುಖಾಂತರ ಜಮಾ ಮಾಡಿರುತ್ತೇವೆ. ವಾದಿ ಅದನ್ನು ಪಡೆದಿರುತ್ತಾರೊ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ಯಾವುದೇ ಭೂಸ್ವಾಧೀನ ಪ್ರಕ್ರಿಯೇ ಆಗಿರುವುದಿಲ್ಲ, ವಾದಿಗಳಿಗೆ ತೊಂದರೆ ಕೊಡುತ್ತಿದ್ದೆವೆ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಏನೂ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸಂಡೂರು.